ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 546(551)
2) ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ: : 24/09/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾಗಿರುವ ಜಿ.ಎಸ್.ಟಿ. ಪರಿಹಾರದ ಮೊತ್ತವೆಷ್ಟು;	ರೂ.13764.31 ಕೋಟಿಗಳು (ಜುಲೈ ಅಂತ್ಯದವರೆಗೆ)
ಆ)	ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.) ನಷ್ಟ ಪರಿಹಾರದ ಅಲಭ್ಯತೆಯಿಂದಾಗಿ ಉಂಟಾಗಿರುವ ಆದಾಯ ಕೊರತೆ ಎಷ್ಟು;	ರೂ.13764.31 ಕೋಟಿಗಳು (ಜುಲೈ ಅಂತ್ಯದವರೆಗೆ)
ಇ)	ಜಿ.ಎಸ್.ಟಿ. ಸೆಸ್ ಹಾಗೂ ವಿಶೇಷ ರೂಪದ ಸಾಲ ಪಡೆಯುವ ಬಗ್ಗೆ ಸರ್ಕಾರ ಯಾವ ವಿಧಾನವನ್ನು ಆಯ್ಕೆ ಮಾಡಿಕೊಂಡಿದೆ; ಇದರಲ್ಲಿ ಎಷ್ಟು ಸಾಲ ಪಡೆಯುವ ಉದ್ದೇಶ ಹೊಂದಿದೆ; ಇದಕ್ಕೆ ಪಾವತಿಸಬೇಕಾದ ಬಡ್ಡಿದರ ಎಷ್ಟು ಇದನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ; ಹಾಗೂ ಇದರಿಂದಾಗುವ ಅನುಕೂಲಗಳೇನು;	ಜಿ.ಎಸ್.ಟಿ. ನಷ್ಟ ಪರಿಹಾರ ಪಡೆಯುವ ಬಗ್ಗೆ ಕೇಂದ್ರ ಸರ್ಕಾರವು ಎರಡು ಆಯ್ಕೆಗಳನ್ನು ನೀಡಿದ್ದು, ಇದರಲ್ಲಿ ರಾಜ್ಯ ಸರ್ಕಾರವು ಆಯ್ಕೆ-1ನ್ನು ಆಯ್ಕೆ ಮಾಡಿಕೊಂಡಿದ್ದು, ಇದರಲ್ಲಿ ರೂ.11,324 ಕೋಟಿ ಸಾಲ ಪಡೆಯಬಹುದಾಗಿದೆ. ಬಡ್ಡಿ ದರವು ಸಾಲ ಪಡೆದ ಸಮಯದಲ್ಲಿ ನಿರ್ಧಾರವಾಗುತ್ತದೆ. ಈ ಸಾಲದ ಮೊತ್ತವನ್ನು ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಾಗುವುದು.
ಈ)	ಸಾಲ ಪಡೆದಲ್ಲಿ, ಈ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಯಾವ ಸಂಪನ್ಮೂಲದಿಂದ ಪಾವತಿಸಬೇಕಾಗುತ್ತದೆ (ವಿವರ ನೀಡುವುದು):	ಜಿ.ಎಸ್.ಟಿ. ನಷ್ಟ ಪರಿಹಾರದ ಬದಲು ಪಡೆದ ಸಾಲದ ಮೇಲಿನ ಬಡ್ಡಿಯನ್ನು ಕೇಂದ್ರ ಸರ್ಕಾರವೇ ಪಾವತಿ ಮಾಡುತ್ತದೆ.
ಉ)	ರಾಜ್ಯ ಸರ್ಕಾರದ ಋಣಭಾರ ಎಷ್ಟು ಲಕ್ಷ ಕೋಟಿಗೆ ಏರಿಕೆಯಾಗಿದೆ ಹಾಗೂ ಈಗ ಹಾಲಿ ಇರುವ ಋಣಭಾರ ಎಷ್ಟು?	ರೂ.11,324 ಕೋಟಿ ಕೇಂದ್ರ ಸರ್ಕಾರವು ಅಸಲು ಮತ್ತು ಬಡ್ಡಿಯನ್ನು ಮರುಪಾವತಿ ಮಾಡುತ್ತಿದ್ದು, ಇದರಿಂದ ರಾಜ್ಯಕ್ಕೆ ಋಣಭಾರವಿರುವುದಿಲ್ಲ. ಮಹಾಲೇಖಪಾಲರ ಪೂರ್ವ ವಾಸ್ತವಿಕ ಲೆಕ್ಕದ ಅನುಸಾರ ಮಾರ್ಚ್-2020ರ ಅಂತ್ಯಕ್ಕೆ ರಾಜ್ಯ ಸರ್ಕಾರದ ಮೇಲೆ ಇರುವ ಬಾಕಿ ಸಾಲದ ಮೊತ್ತ ರೂ.2,34,245.42 ಕೋಟಿಗಳು.

ಸಂಖ್ಯೆ: ಆಇ 57 ಸಿಎಸ್‌ಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.